RNU AIR DHARWAD

# OCTOBER 07, 2023
# ALL INDIA RADIO- DHARWAD
# PRADESH SAMACHARA (KANNADA) 7:05 AM

<><><>

ಆಕಾಶವಾಣಿ–ಪ್ರದೇಶ ಸಮಾಚಾರ

<><><>

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ನಾಲ್ಕು ಸಾವಿರದ ಎಂಟನೂರಾ ಅರವತ್ತು ಕೋಟಿ ರೂಪಾಯಿ, ಬರ ಪರಿಹಾರ ಕೋರಿ, ಕೇಂದ್ರಕ್ಕೆ ವರದಿ – ಸಿದ್ದರಾಮಯ್ಯ.
- ರಾಜ್ಯದ ಬರ ಪೀಡಿತ ಪ್ರದೇಶಗಳಿಗೆ, ಕೇಂದ್ರ ಬರ ಅಧ್ಯಯನ ತಂಡದ ಭೇಟಿ.
- ರಾಜ್ಯಾದ್ಯಂತ ಎರಡು ಸಾವಿರ ಪಬ್ಲಿಕ್ ಶಾಲೆಗಳ ಸ್ಥಾಪನೆ – ಡಿ.ಕೆ.ಶಿವಕುಮಾರ್.
- ನೆಹರು ಯುವ ಕೇಂದ್ರ, ಯುವಜನರ ಪ್ರತಿಭಾ ವಿಕಾಸಕ್ಕೆ ವೇದಿಕೆ – ಸಂತೋಷ ಲಾಡ್.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ 236 ತಾಲೂಕುಗಳ ಪೈಕಿ, 195 ತಾಲೂಕುಗಳು ಬರ ಪೀಡಿತವಾಗಿವೆ. ಕೇಂದ್ರಕ್ಕೆ ನಾಲ್ಕು ಸಾವಿರದ ಎಂಟನೂರಾ ಅರವತ್ತು ಕೋಟಿ ರೂಪಾಯಿ, ಬರ ಪರಿಹಾರ ಕೋರಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಚಿತ್ರದುರ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಾಸ್ತವಿಕ ನಷ್ಟಕ್ಕಿಂತ, ಕೇಂದ್ರದ ಮಾರ್ಗದರ್ಶಿ ಸೂತ್ರದ ಪ್ರಕಾರ ಸಲ್ಲಿಸಬಹುದಾದ, ನಷ್ಟ ಪರಿಹಾರದ ಮೊತ್ತಕ್ಕಿಂತ ಕಡಿಮೆ ಬರ ಪರಿಹಾರ ಕೋರಲಾಗಿದೆ ಎಂದರು. ರಾಜ್ಯದ ನಲವತ್ತೆರಡು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಕೇಂದ್ರ ಬರ ಅಧ್ಯಯನ ತಂಡಗಳು ಹನ್ನೊಂದು ಜಿಲ್ಲೆಗಳಿಗೆ ಭೇಟಿ ನೀಡಿ, ಕೇಂದ್ರಕ್ಕೆ ವರದಿ ಸಲ್ಲಿಸಲಿವೆ ಎಂದು, ಮುಖ್ಯಮಂತ್ರಿ ಹೇಳಿದರು.

<><><>

ಬೆಳಗಾವಿ ಜಿಲ್ಲೆಯ ಬರ ಪರಿಸ್ಥಿತಿ ಅಧ್ಯಯನಕ್ಕಾಗಿ, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ, ಅಜಿತ್ ಕುಮಾರ್ ಸಾಹು ನೇತೃತ್ವದ ಕೇಂದ್ರ ಬರ ಅಧ್ಯಯನ ತಂಡ ಆಗಮಿಸಿದ್ದು, ವಿವಿಧ ತಾಲೂಕುಗಳಿಗೆ ಭೇಟಿ ನೀಡಿ ಪರಿಶೀಲಿಸಿತು. ಬೆಳಗಾವಿ ಮತ್ತು ಖಾನಾಪುರ ಹೊರತುಪಡಿಸಿ, 13 ತಾಲೂಕುಗಳನ್ನು ಬರ ಪೀಡಿತ ಎಂದು ಸರಕಾರ ಘೋಷಿಸಿದೆ.

<><><>

ಸವದತ್ತಿ, ರಾಮದುರ್ಗ ಮತ್ತು ಬೈಲಹೊಂಗಲ ತಾಲೂಕುಗಳಲ್ಲಿ ತಂಡ ಬರ ಪರಿಸ್ಥಿತಿ ವೀಕ್ಷಿಸಿತು.

<><><>

ತುಮಕೂರು ಹಾಗೂ ವಿಜಯಪುರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಬರ ಪರಿಸ್ಥಿತಿಯನ್ನು ಈ ತಂಡ ಪರಿಶೀಲಿಸಿತು.

<><><>

ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಅನುದಾನ ನೀಡುವಂತೆ, ಇಂದು ದಾವಣಗೆರೆಗೆ ಭೇಟಿ ನೀಡಲಿರುವ, ಕೇಂದ್ರ ಬರ ಅಧ್ಯಯನ ತಂಡಕ್ಕೆ ಮನವರಿಕೆ ಮಾಡಲಾಗುವುದು ಎಂದು, ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

<><><>

ಗದಗ ಜಿಲ್ಲೆ ಲಕ್ಷ್ಮೇಶ್ವರ, ಶಿರಹಟ್ಟಿ ಹಾಗೂ ಗದಗ ತಾಲೂಕುಗಳು ಬರಪೀಡಿತವಾಗಿದ್ದು, ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಹೆಚ್ಚುವರಿ ಸಲಹೆಗಾರ ಡಿ.ರಾಜಶೇಖರ ನೇತೃತ್ವದ ಬರ ಅಧ್ಯಯನ ತಂಡ, ಭೇಟಿ ನೀಡಿ ಪರಿಶೀಲಿಸಿತು. ಲಕ್ಷ್ಮೇಶ್ವರ ತಾಲೂಕಿನ ಹುಲಗೇರಿ ಬಣ, ಗದಗ ತಾಲೂಕಿನ ಮುಳಗುಂದ ಗ್ರಾಮಗಳಿಗೆ ಭೇಟಿ ನೀಡಿ, ಹಾನಿಗೊಳಗಾದ ಬೆಳೆಗಳನ್ನು ವೀಕ್ಷಿಸಿತು.

<><><>

ಬರ ಪೀಡಿತ ವಿಜಯಪುರ ಜಿಲ್ಲೆಗೆ ಹೆಚ್ಚಿನ ಅನುದಾನ ಒದಗಿಸುವಂತೆ, ಬರ ಅಧ್ಯಯನ ತಂಡಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮನವಿ ಮಾಡಿದ್ದಾರೆ.

<><><>

ಕೇಂದ್ರದ ಬರ ಅಧ್ಯಯನ ತಂಡ, ಇಂದು ಧಾರವಾಡ ಜಿಲ್ಲೆಗೆ ಬೇಟಿ ನಿಡಿ, ಪರಿಶೀಲಿಸಲಿದೆ ಎಂದು, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

<><><>

ಕೇಂದ್ರ ಜಲ ಶಕ್ತಿ ಆಯುಕ್ತಾಲಯದ ನಿರ್ದೇಶಕ ವಿ.ಅಶೋಕ್ ಕುಮಾರ್ ನೇತೃತ್ವದ ಕೇಂದ್ರ ಬರ ಅಧ್ಯಯನ ತಂಡ, ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ಗ್ರಾಮಗಳಿಗೆ ಭೇಟಿ ನೀಡಿ, ಪರಿಶೀಲಿಸಿತು. ಚಿಕ್ಕಬಳ್ಳಾಪುರ ತಾಲೂಕಿನ ಚೊಕ್ಕಹಳ್ಳಿ ಗ್ರಾಮದ ರೈತ ಮಂಜುನಾಥ್ ಹಾಗೂ ಕೃಷ್ಣಪ್ಪ ಅವರ ಹೊಲಗಳಿಗೆ ಭೇಟಿ ನೀಡಿ, ರೈತರು ಮತ್ತು ಅಧಿಕಾರಿಗಳಿಂದ ಮಾಹಿತಿ ಪಡೆದರು.

<><><>

ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳಬಹುದಾದ ಬೆಳೆಗಳ ಕುರಿತು, ಸಂಶೋಧನೆಗಳು ನಡೆಯಬೇಕು. ಅದಕ್ಕೆ ಅಗತ್ಯವಾದ ಸಹಕಾರವನ್ನು ರಾಜ್ಯ ಸರ್ಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಚಿತ್ರದುರ್ಗದ ಹಿರಿಯೂರಿನಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಬಬ್ಬೂರು ಫಾರ್ಮ್‌ನ ಶತಮಾನೋತ್ಸವ, ಸಿರಿಧಾನ್ಯ ಮೇಳ ಮತ್ತು ತೋಟಗಾರಿಕಾ ಬೆಳೆಗಳ ವಿಚಾರ ಸಂಕಿರಣ ಉದ್ಘಾಟಿಸಿ, ಮಾತನಾಡಿದರು.

<><><>

ಪ್ರಸಕ್ತ ಸಾಲಿನ ರಾಜ್ಯ ಮಟ್ಟದ, ಗಾಂಧಿ ಗ್ರಾಮ ಪುರಸ್ಕಾರ ಹಾಗೂ ಸ್ವಚ್ಛ ಸರ್ವೇಕ್ಷಣ ಗ್ರಾಮೀಣ ವಿಭಾಗದ ಪ್ರಶಸ್ತಿಗೆ ಧಾರವಾಡ ತಾಲೂಕು ಕೊಟಬಾಗಿ ಗ್ರಾಮ ಭಾಜನವಾಗಿದೆ. ಮಾದರಿ ಗ್ರಾಮ ಪುರಸ್ಕಾರಕ್ಕೆ ಭಾಜನವಾದ, ಧಾರವಾಡ ತಾಲೂಕು ಕೊಟಬಾಗಿ ಗ್ರಾಮದ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುನಂದಾ ಕಮತಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪಿಡಿಓ ಸುನಂದಾ ಕಮತಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸಲು, ರಾಜ್ಯಾದ್ಯಂತ 2 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಕಾರ್ಪೋರೆಟ್ ಸಂಸ್ಥೆಗಳ ಸಹಯೋಗದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಿಳಿಸಿದ್ದಾರೆ. ರಾಮನಗರ ಜಿಲ್ಲೆ ಮಾದರಿ ತಾಲೂಕಿನ ಕುದೂರಿನಲ್ಲಿ ಸರ್ಕಾರಿ ಶಾಲೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ಸಾಮಾಜಿಕ ಹೊಣೆಗಾರಿಕೆ ನಿಧಿಯ ಹಣವನ್ನು, ಸಂಪೂರ್ಣವಾಗಿ ಶಿಕ್ಷಣಕ್ಕೆ ಬಳಕೆ ಮಾಡಲು ನಿರ್ಧರಿಸಲಾಗಿದೆ ಎಂದು, ಹೇಳಿದರು.

<><><>

ನೆಹರು ಯುವ ಕೇಂದ್ರ, ಯುವಜನರ ಪ್ರತಿಭಾ ವಿಕಾಸ ಮತ್ತು ಪುರಸ್ಕಾರಕ್ಕೆ ಮಹತ್ವದ ವೇದಿಕೆಯಾಗಿದೆ ಎಂದು, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದ್ದಾರೆ. ಜಿಲ್ಲಾ ಮಟ್ಟದ ಯುವ ಉತ್ಸವ – ಇಂಡಿಯಾ@2047 ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಯುವಶಕ್ತಿಯೇ ದೇಶದ ಅಮೂಲ್ಯ ಸಂಪತ್ತು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಲು, ಪ್ರತಿಭೆಗಳ ಶೋಧಕ್ಕಾಗಿ ಯುವ ವ್ಯವಹಾರಗಳ ಸಚಿವಾಲಯ, 'ಪಂಚ ಪ್ರಣ್' ಧ್ಯೇಯದೊಂದಿಗೆ, ಯುವ ಉತ್ಸವ ಆಯೋಜಿಸಿದೆ ಎಂದರು. ಜಿಲ್ಲಾ ಯುವಜನ ಅಧಿಕಾರಿ ಗೌತಮ್ ರೆಡ್ಡಿ, ಶಿಕ್ಷಣ ತಜ್ಞ ಎಂ.ಎಂ. ಚಿಕ್ಕಮಠ ಹಾಗೂ ಪತ್ರಕರ್ತ ಬಸವರಾಜ ಹೊಂಗಲ್ ಪುರಸ್ಕಾರಗಳನ್ನು ನೀಡಿ, ಗೌರವಿಸಿದರು.

<><><>

ಹವಾಮಾನ ವೈಪರೀತ್ಯದ ಪ್ರಭಾವದಿಂದ, ಕಪ್ಪೆಗಳು, ಸಲಾಮಾಂಡರ್‌ಗಳು ಹಾಗೂ ಸಿಸಿಲಿಯನ್‌ಗಳ ಸಂಖ್ಯೆಯಲ್ಲಿ ಕಳವಳಕಾರಿ ಪ್ರಮಾಣದಲ್ಲಿ ಕುಸಿತ ಕಂಡು ಬಂದಿದೆ ಎಂದು, ಉಭಯಜೀವಿಗಳ ಹೆಸರಾಂತ ತಜ್ಞ, ಬೆಂಗಳೂರಿನ ಡಾಕ್ಟರ್ ಕೆ.ವಿ.ಗುರುರಾಜ್, ವೈಜ್ಞಾನಿಕ ಸಂಶೋಧನಾ ಪತ್ರಿಕೆ 'ನೇಚರ್'ದಲ್ಲಿ, ಮಹತ್ವದ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿ, ವಿಶ್ವದ ಗಮನ ಸೆಳೆದಿದ್ದಾರೆ. "ಕುಸಿಯುತ್ತಿರುವ ವಿಶ್ವದ ಉಭಯಜೀವಿಗಳ ಸಂಖ್ಯೆಗೆ ಹೊಸ ಕಾರಣ ಮತ್ತು ಸವಾಲುಗಳು" ಎಂಬ ಸಂಶೋಧನಾ ಪ್ರಬಂಧದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಡಾಕ್ಟರ್ ಕೆ.ವಿ.ಗುರುರಾಜ್.

<><><>

ಡಾಕ್ಟರ್ ಕೆ.ವಿ.ಗುರುರಾಜ್ 45 ಸೆಕೆಂದುಗಳು

<><><>

'ನನ್ನ ಮಣ್ಣು, ನನ್ನ ದೇಶ' ಅಭಿಯಾನದ ಅಂಗವಾಗಿ, ಅಮೃತ ಕಲಶ ಯಾತ್ರೆ ಹಾಗೂ ಮಣ್ಣು ಸಂಗ್ರಹ ಕಾರ್ಯಕ್ರಮ, ಮಂಡ್ಯ ತಾಲೂಕಿನ ಹುಲಿವಾನ ಗ್ರಾಮ ಹಾಗೂ ರಾಯಚೂರಿನಲ್ಲಿ ನಡೆಯಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಮಾರೋಪದ ಅಂಗವಾಗಿ, ಮಣ್ಣನ್ನು ಸಂಗ್ರಹಿಸಲಾಗುತ್ತಿದೆ.

<><><>

ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತೀಯ ಹಾಕಿ ತಂಡ, ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ, 5–1 ಗೋಲುಗಳಿಂದ, ಕಳೆದ ಸಲದ ಚಾಂಪಿಯನ್ ಜಪಾನ್ ತಂಡವನ್ನು ಮಣಿಸಿ, ಚಿನ್ನದ ಪದಕ ಗೆದ್ದುಕೊಂಡಿದೆ. ಈ ಗೆಲುವಿನೊಂದಿಗೆ ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಪಡೆದಿದೆ. 9 ವರ್ಷಗಳ ಬಳಿಕ ಭಾರತ ತಂಡ, ಈ ಸಾಧನೆ ಮಾಡಿದೆ. 22 ಚಿನ್ನ, 34 ಬೆಳ್ಳಿ, 39 ಕಂಚು, ಒಟ್ಟು 95 ಪದಕಗಳೊಂದಿಗೆ ಭಾರತ ಪದಕ ಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಸಂತ ಸಮಾವೇಶ ಸೋಮವಾರ, ಮೂಡಬಿದಿರೆಯಲ್ಲಿ ಜರುಗಲಿದೆ.

<><><>

ಧಾರವಾಡದ ಜನತಾ ಶಿಕ್ಷಣ ಸಮಿತಿಯ ಸುವರ್ಣ ಮಹೋತ್ಸವ ಸಮಾರಂಭವನ್ನು, ಡಾಕ್ಟರ್ ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು.

<><><>

ಮಿ ನ್ ಇಂದ್ರ ಧನು ್ 3ನೇ ಸುತ್ತಿನ ಲಸಿಕಾಕರಣ ಇದೇ 9 ರಿಂದ 14ರ ವರೆಗೆ ರಾಜ್ಯಾದ್ಯಂತ ಕೈಗೊಳ್ಳಲಾಗುತ್ತಿದೆ.

<><><>

ಪಿ.ಎಂ. ಸ್ವ–ನಿಧಿ ಯೋಜನೆಯಡಿ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡುವಂತೆ, ಬ್ಯಾಂಕ್ ಅಧಿಕಾರಿಗಳಿಗೆ, ಚಾಮರಾಜನಗರ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನಾಲ್ಕು ಸಾವಿರದ ಎಂಟನೂರಾ ಅರವತ್ತು ಕೋಟಿ ರೂಪಾಯಿ, ಬರ ಪರಿಹಾರ ಕೋರಿ, ಕೇಂದ್ರಕ್ಕೆ ವರದಿ – ಸಿದ್ದರಾಮಯ್ಯ.
- ರಾಜ್ಯದ ಬರ ಪೀಡಿತ ಪ್ರದೇಶಗಳಿಗೆ, ಕೇಂದ್ರ ಬರ ಅಧ್ಯಯನ ತಂಡದ ಭೇಟಿ.
- ರಾಜ್ಯಾದ್ಯಂತ ಎರಡು ಸಾವಿರ ಪಬ್ಲಿಕ್ ಶಾಲೆಗಳ ಸ್ಥಾಪನೆ – ಡಿ.ಕೆ.ಶಿವಕುಮಾರ್.

- ನೆಹರು ಯುವ ಕೇಂದ್ರ, ಯುವಜನರ ಪ್ರತಿಭಾ ವಿಕಾಸಕ್ಕೆ ವೇದಿಕೆ – ಸಂತೋಷ ಲಾಡ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ಹರ್ಷ